# ಪ್ರಸ್ತುತದಲ್ಲಿ ಬಯಲಾಟದ ಸ್ಥಿತಿಗತಿ ಮತ್ತು ಸವಾಲುಗಳು

**ಪವಿತ್ರ ಎ.ವಿ.**

**ಅತಿಥಿ ಉಪನ್ಯಾಸಕರು**

**ಶ್ರೀಮತಿ ಇಂದಿರಾಗಾಂಧಿ ಮಹಿಳಾ ಕಾಲೇಜು ಸಾಗರ**

ಬಯಲಾಟ ಒಂದು ಸಾಂಸ್ಕೃತಿಕ ರಂಗಕಲೆ ಮತ್ತು ನಮ್ಮ ನಾಡಿನ ಜೀವಳಾವಾಗಿತ್ತೆಂದು ನಮ್ಮ ಪ್ರಾಚೀನ ಕವಿಗಳಿಂದ ತಿಳಿದುಬರುತ್ತದೆ. ಕನ್ನಡ ಅತ್ಯಂತ ಪ್ರಾಚೀನ ಕವಿ ಶ್ರೀವಿಜಯ ತನ್ನ 'ಕವಿರಾಜಮಾರ್ಗದಲ್ಲಿ 'ಪಗರಣ' ಎಂಬ ಹೆಸರಿನಿಂದ ವಿವೇಚಿಸಿ ಶ್ರುತಿ ದುಷ್ಟ, ಅರ್ಥದುಷ್ಟ, ಕಲ್ಪನೋಕ್ತಿ ಕಷ್ಟಗಳು ಎಂದು ತಿಳಿಸಿ ಪಗರಣದ ಮಾತು ಅದೋಷ ಎನುತ್ತಾನೆ. ಪಗರಣವು ದೇಷ ಅಭಿನಯ ಪ್ರಧಾನವಾಗಿದ್ದು ವಾಚಕಾಂಶವು ಅವುಗಳಿಗೆ ಅಧೀನವಾಗಿದ್ದ ಒಂದು ಬಗೆಯ ಬಯಲು ನಾಟಕ ಎಂಬ ಭಾವನೆ ಬರುತ್ತದೆ ಎಂದು ಡಾ.ಚಿದನಂದಮೋರ್ತಿ ತಿಳಿಸಿದ್ದಾರೆ. ಈ ಮೇಲಿನ ಅಂಶಗಳನ್ನು ಗಮನಿಸಿದರೆ ಪಗರಣ ಎನ್ನುವುದು ಬಯಲು ನಾಟಕ ಕುರಿತಾಗಿಯೇ ನಿರೂಪಿಸಿದ ಪದವಾಗಿರಬೇಕು ಎಂದೆನಿಸುತ್ತದೆ. ಹಾಗೆ ಕೇಶಿರಾಜನು 'ನಾಳ್‌ಪಗರಣ' ಎಂಬ ಶಬ್ದ ಬಳಕೆ ಮಾಡಿದ್ದಾನೆ. ಅಂದು ದೇಶದಲ್ಲಿ ಆಡಿ ತೋರಿಸುತ್ತಿದ್ದ ದೇಶಿಯ ಕಲಾ ಪ್ರಕಾರವಾಗಿತ್ತೆಂದು ಮುಳಿಯ ತಿಮ್ಮಪ್ಪನ್ನು ಗುರುತಿಸುತ್ತಾರೆ. (ದೊಡ್ಡಾಟ ಒಂದು ಪರಿಕಲ್ಪನೆ, ಡಾ. ಶ್ರೀಶೈಲ ಹುದ್ದಾರ. ಪು–4) 'ನಾಡಾಡಿಗಳ ನಾಟಕ' ಎಂದು ಕುಮಾರವ್ಯಾಸ ಕರೆದರೆ 'ಸೋಗು' ಎಂದು ದೇವರ ದಾಸಿಮಯ್ಯ ಬಳಕೆ ಮಾಡುತ್ತಾರೆ. ಹಾಗೆ ಬಸವಣ್ಣ 'ಹಗರಣ' ಎಂಬ ಶಬ್ದ ಬಳಕೆ ಮಾಡಿದ್ದಾನೆ. ನಯಸೇನ ಕೂಡ ಪಗರಂದ ವ್ಯಾಖ್ಯಾನ ಮಾಡಿ 'ಮೂರುದಿನದ ಪಗರಣಕ್ಕೆ ಗಡ್ಡ ಮೀಸೆ ಬೊಳಿಸಿಕೊಂಬರ್' ಎಂದು ತಿಳಿಸಿದ್ದಾನೆ. 'ಬಾಜನಗಬ್ಬ' ಎಂಬ ಪ್ರಕಾರ ಕೂಡಾ ದೊಡ್ಡಾಟವನ್ನೆ ನಿರ್ದೇಶಿಸುವಂತಿದೆ ಎಂದು ಡಾ.ಗದ್ದಿಗಿಮಠ ಗುರುತಿಸುತ್ತಾರೆ. ಹೀಗೆ ಬಯಲಾಟ ಕನ್ನಡಿಗರ ಜೀವಾಳುವಾಗಿತ್ತೆಂದು ಪ್ರಾಚೀನರಿಂದ ತಿಳಿದುಬರುತ್ತದೆ.

ಪ್ರಾಚೀನದಿಂದ ಇಂದಿನವರೆಗೂ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿ ನೋಡಿದಾಗ ಬಯಲಾಟಕ್ಕೂ ನಮ್ಮ ನಾಡಿಗೂ ಇರುವ ನಮಗೆ ಅರಿವಾಗುತ್ತದೆ. ಹೀಗೆ ಇದರ ವ್ಯಾಪ್ತಿ ಇಂದಿನವರೆಗೂ ಹಬ್ಬಿ ಆಧುನಿಕ ಯುಗದಲ್ಲಿ ಅತ್ಯಂತ ಪ್ರಸಿದ್ದ ರಂಗ ಕಲೆಯಾಗಿ ಬಯಲಾಟ ಬೆಳೆದು ನಿಂತಿದೆ. ಆದರಲ್ಲಿ ರಾಯಚೂರು ಜಿಲ್ಲೆಯ ಕೊಡುಗೆ ಅಪಾರವಾದುದು. ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಈ ಕಲೆ ಜನಸಾಮಾನ್ಯರ ಹೃದಯ ನಾಡಿಯಾಗಿತ್ತು. ವರ್ಷವೆಲ್ಲ ದುಡಿದು ದಣಿದ ನಮ್ಮ ಜನಪದರು ಹಬ್ಬ, ಹರಿದಿನ, ಜಾತ್ರೆಗಳಲ್ಲಿ ಮನೋರಂಜನೆಗೆಂದು ಬಯಲಾಟವನ್ನು ಆಡುತ್ತಿದ್ದರು. ರಾಮಾಯಣ, ಮಹಾಭಾರತ ಹಾಗೂ ಪುರಾಣ ಹಿನ್ನೆಲೆ ಹೊಂದಿರುವ ಬಯಲಾಟ ಕಥೆಗಳು ಜನಸಾಮಾನ್ಯರ ಮೇಲೆ ಪ್ರೀತಿ, ಪ್ರೇಮ, ಸ್ನೇಹ, ಸ್ವಾಭಿಮಾನ, ಭಕ್ತಿ ಧಾರ್ಮಿಕ, ಸಾಮಾಜಿಕ ಮೌಲ್ಯಗಳನ್ನು ಸಾರುತ್ತಿದ್ದವು. ಆ ದೃಷ್ಟಿಯಿಂದ ಜನಪದರು ಬಯಲಾಟವನ್ನು ಊರಿನ ಇಷ್ಟ ದೇವರ ಸಮ್ಮುಖದಲ್ಲಿ ಪೂಜಿಸಿ, ಅದೇ ದೇವರ ಗುಡಿಯ ಮುಂದೆ ಆಡಿಸುತ್ತಿದ್ದರು. ಇದರಿಂದಾಗಿ ಮನುಷ್ಯನಲ್ಲಿರುವ ಅಹಂಕಾರ , ದ್ವೇಷ, ಅಸೂಯೆ, ಅನಾಚಾರ, ಹೆಣ್ಣಿನ ಮೇಲಿನ ದಬ್ಬಾಳಿಕೆ ಹೀಗೆ ಇತ್ಯಾದಿಗಳು ತೊಲಗಿಸಿ ಮನುಷ್ಯನ ಗುಣಗಳನ್ನು ಪರಿಪಕ್ವಗೊಳಿಸುತ್ತವೆ ಎಂಬುದು ಅವರ ಪ್ರಮುಖ ಉದ್ದೇಶವಾಗಿತ್ತು.

ಈ ನಿಟ್ಟಿನಲ್ಲಿ ಊರಿನ ಹಿರಿಯರು ಸೇರಿ ಒಂದು ಮೌಲ್ಯಯುತ ಕಥೆಯನ್ನು ಆಯ್ಕೆ ಮಾಡಿಕೊಂಡು ತಮ್ಮ ಇಷ್ಟದೈವದಲ್ಲಿ ಬೇಡಿಕೊ0ಂಡು ಬಯಲಾಟವನ್ನು ಅತ್ಯಂತ ಸಂಭ್ರಮದಿಂದ ಆಡಿಸಿ ರಂಜನೆಗೊಳ್ಳುತ್ತಿದ್ದರು. ಇದರಿಂದಾಗಿ ಊರಲ್ಲಿ ಮಳೆ–ಬೆಳೆ ಸರಿಯಾಗಿ ಬಂದು ಜನ ಸಂತೃಪ್ತಿಯಿಂದ ಜೀವನ ನಡೆಸಬಹುದೆಂಬ ಆಶಯ ಕಾಳಗ, ಪಾರ್ಥವಿಜಯ, ಗಿರಿಜಾ ಕಲ್ಯಾಣ ಸೇರಿದಂತೆ ರಾಮಾಯಣ ಮಹಾಭಾರತ ಕಥಾ ವಸ್ತುವುಳ್ಳ ಕಥೆಯನ್ನು ಆಡಿಸಲಾಗುತ್ತಿತ್ತು. ಇದರಿಂದಾಗಿ ಪರಸ್ಪರ ಸ್ನೇಹ, ಪ್ರೀತಿ, ಔದಾರ್ಯಗಳಿಂದ ಜನಸಾಮಾನ್ಯರ ಬದುಕು ಅನ್ಯೋನ್ಯವಾಗಿರುತ್ತಿತ್ತು. ಕಾಲಕಳೆದಂತೆ ಜನಸಾಮಾನ್ಯರ ಒತ್ತಡದ ಜೀವನ ಈ ಆಧುನಿಕ ತಂತ್ರಜ್ಞಾನ, ನಗರಿಕರಣ, ಮಾನಸಿಕ ಸ್ಥಿತಿಯೂ ಕೂಡ ಬದಲಾಗುತ್ತ ಸಾಗುತ್ತಿದೆ. ಇಂತಹ ಸಂದಿಗ್ದ ಸ್ಥಿತಿಯೂ ನಮ್ಮ ಜನಪದರ ಜೀವನಾಡಿಯಾದ ಬಯಲಾಟದ ರಂಗಭೂಮಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಇದರಿಂದಾಗಿ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಧಕ್ಕೆ ಬರುತ್ತಿದೆ. ಪ್ರಸ್ತುತದಲ್ಲಿ ನಾವು ಇಂತಹ ಶ್ರೇಷ್ಠ ರಂಗಕಲೆಯ ಮೌಲ್ಯ ಕಳೆದುಕೊಳ್ಳುತ್ತಿದ್ದೇವೆ. ಭಯ

ಒಂದು ಕಡೆ ಕಾಡಿದರೆ ಈ ತಂತ್ರಜ್ಞಾನದ ಯುಗದಲ್ಲಿ ಇದರ ಅವಶ್ಯಕತೆ ಬೇಕೆ? ಎಂಬ ಪ್ರಶ್ನೆಗಳು ಜನಸಾಮಾನ್ಯರನ್ನು ಕಾಡುತ್ತಿವೆ. ನಮ್ಮ ಹಿರಿಯ ತಲೆಮಾರಿನ ಜನರು ಬಯಲಾಟವನ್ನು ಒಪ್ಪಿಕೊಂಡು ಪ್ರೋತ್ಸಾಹಿಸಿದರೆ ಹೊಸ ತಲೆಮಾರಿನ ಜನ ಇದರ ಮೇಲಿನ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವಾದ ಕಿಲವೊಂದು ಅಂಶಗಳನ್ನು ಚರ್ಚಿಸುವುದು ಸೂಕ್ತ.

**ಹೊಸ ತಂತ್ರಜ್ಞಾನ ಮತ್ತು ನಗರಿಕರಣ**

ಕಾಲಕಳೆದಂತೆ ಮಾನವನ ಬದುಕು ಹೊಸ ಹೊಸ ಆಧುನಿಕ ತಂತ್ರಜ್ಞಾನದ ಕಡೆಗೆ ವಾಲಿಕೊಂಡಿದೆ. ಮೊಬೈಲ್, ಟಿ.ವಿ. ಲ್ಯಾಪ್‌ಟಾಪ್‌ಗಳತಂಹ ತಂತ್ರಜ್ಞಾನ ವಸ್ತುಗಳ ಬಳಕೆಯಿಂದಾಗಿ ಕಡಿಮೆ ಸಮಯದಲ್ಲಿ ತಾವು ಕೊಂಡ ಪ್ರದೇಶದಲ್ಲಿ ಸಿನಿಮಾ, ಧಾರವಾಯಿಗಳನ್ನು ನೋಡಿ ರಂಜಿಸಬಹುದು. ಆದ್ದರಿಂದ ಈ ಜನತೆ ಬಯಲಾಟದಂತಹ ಕಲೆಯನ್ನು ಒಂದು ರೀತಿಯಿಂದ ತಿರಸ್ಕರಿಸುತ್ತಿದ್ದಾರೆ. ಹಾಗಾಗಿ ಆಧುನಿಕ ತಂತ್ರಜ್ಞಾವೂ ರಂಗ ಕಲೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.

**ಸ್ಥಳಿಯ ರಾಜಕೀಯದ ಸಂಘರ್ಷಗಳು**

ಬಯಲಾಟದಂತಹ ರಂಗಕಲೆಯ ಮೇಲೆ ಸ್ಥಳಿಯ ರಾಜಕೀಯ ಸಂಘರ್ಷಗಳು ಸಹ ಪ್ರಮುಖವಾಗುತ್ತವೆ. ಇದರಲ್ಲಿ ಪ್ರಮುಖವಾಗಿ ಗ್ರಾಮಪಂಚಾಯಿತ ಚುನಾವಣೆಯಿಂದ ಸ್ಥಳಿಯರಲ್ಲಿ ಸಾಮಾಜಿಕ ಮನೋಭಾವನೆ ಕಳೆದುಕೊಂಡು ಜನರ ಮನಸ್ಸುಗಳು ಒಡೆದು ಹೋಗಿ ಒಗ್ಗಟ್ಟು ಬಲಹೀನವಾಗಿ ಜಾತಿ, ಕುಟುಂಬ, ಧರ್ಮಗಳಾದ ಸಂಘರ್ಷಗಳು ಮೀತಿಮೀರಿ ಸಾಮಜಿಕ ಸಂಸ್ಕೃತಿಯ ಪರಂಪರೆಯಾದ ಬಯಲಾಟದ ಕಲೆಯನ್ನು ಉಳಿಸಿಕೊಳ್ಳುವುದು ಮತ್ತು ನೆರವೇರಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಜನಸಾಮಾನ್ಯರು ಕಲೆಯ ವಿಷಯ ಬಂದಾಗ ಸಾಮೂಹಿಕ ವರ್ತಿಸುವುದು ಅನಿವಾರ್ಯವಾಗಿದೆ.

**ನಗರಿಕರಣ ಸೆಳೆತ**

ನಮ್ಮ ಹಿರಿಯ ತಲೆಮಾರಿನ ಜನಸಾಮಾನ್ಯರು ಏನೆ ಕಷ್ಟಗಳು ಬಂದರೂ ತಮ್ಮ ಹಳ್ಳಿಯನ್ನು ತ್ಯಜಿಸುತ್ತಿರಲಿಲ್ಲ. ಆದರೆ ಅದಕ್ಕೆ ತದ್ವಿರುದ್ಧವಾಗಿ ಜನತೆ ಬದಲಾಗಿದ್ದಾರೆ. ಉದ್ಯೋಗದ ದೃಷ್ಟಿಯಿಂದ ಜನಸಾಮಾನ್ಯರು ಬೆಂಗಳೂರ, ಮಂಗಳೂರು, ಬಾಂಬೆ, ಪೂನ, ಹೈದರಾಬಾದದಂತ ನಗರಗಳಿಗೆ ವಲಸೆ ಹೋಗಿ ಗ್ರಾಮಗಳತ್ತ ತಿರುಗಿ ಬರುವುದು ಅಪರೂಪವಾಗಿದೆ. ಹಬ್ಬ ಹರಿದಿನಗಳಲ್ಲಿ ಒಂದೆರೆಡು ದಿನ ಬಂದು ಹೋಗುವವಷ್ಟು ಜನಸಾಮಾನ್ಯರು ಸೀಮಿತವಾಗಿದ್ದಾರೆ. ಹಾಗಾಗಿ ಪರಸ್ಥಿತಿ ಈಗಿದ್ದಾಗ ಬಯಲಾಟದಂತಹ ಕಲೆಯನ್ನು ಮುಂದುವರಿಸುವುದು ಮತ್ತು ಪ್ರೋತ್ಸಾಹಿರುವವರ ಸಂಖ್ಯೆ ಕಡಿಮೆಯಾಗುತ್ತದೆ. ಬಯಲಾಟ ಮೂಲ ಹಳ್ಳಿಗಳ ಪರಂಪರೆ ಹಳ್ಳಿಗರು ನಗರದ ಕಡೆ ವಾಲಿದರೆ ಇದು ಉಳಿಯುವುದಾದರು ಹೇಗೆ? ಎಂಬುದು ಬಹುಮುಖ್ಯ ಪ್ರಶ್ನೆಯಾಗಿದೆ.

**ಸಾಮಾಜಿಕ ನಾಟಕಗಳ ಭರಾಟೆ**

ಕಾಲ ಬದಲಾದಂತೆ ಮನುಷ್ಯನ ಮನಸ್ಸು ಕೂಡ ಬದಲಾಗುತ್ತದೆ. ಹಾಗಾಗಿ ಪ್ರಸ್ತುತ ದಿನಮಾನಗಳಲ್ಲಿ ಸಾಮಾಜಿಕ ನಾಟಕಗಳನ್ನು ಈಗಿನ ಜನತೆಯನ್ನು ಆಕರ್ಷಿಸುತ್ತಿವೆ. ಅದರಲ್ಲಿ ಯುವಜನತೆಯ ಮನಸ್ಸು ಹೊಸದನ್ನು ಆಕರ್ಷಿಸುತ್ತದೆ. ಸಾಮಾಜಿಕ ನಾಟಕದ ವಸ್ತು, ಅಲ್ಲಿಯ ಶೈಲಿ ಸಂಗೀತ, ಹೊಸ ಮಾದರಿಯ ಡ್ಯಾನ್ಸುಗಳು, ಪಾತ್ರಗಳ ಸಂಭಾಷಣೆಗಳು ಯುವಜನತೆಯನ್ನು ಮಿತಿಮೀರಿ ಆಕರ್ಷಿಸುತ್ತವೆ. ಹಾಗಾಗಿ ಪ್ರಾಚೀನ ಮೌಲ್ಯದ ಬಯಲಾಟದ ರಂಗಕಲೆಯನ್ನು ಅಷ್ಟಾಗಿ ಯಾರು ಇಷ್ಟಪಡುವುದಿಲ್ಲ.

**ಸಿನಿಮಾ ಮತ್ತು ಇತರೆ ಮಾಧ್ಯಮಗಳು**

ಈ ಆಧುನಿಕ ಯುಗದಲ್ಲಿ ಸಿನಿಮಾ ಮಾಧ್ಯಮವಂತು ಅತಿಯಾಗಿ ಆಕರ್ಷಿಸುವಂತಹ ದೃಶ್ಯ ಕಲೆಯಾಗಿದೆ. ಆಧುನಿಕ ತಂತ್ರಜ್ಞಾನದಿಂದಾಗಿ ಹೊಸ ಜಾಯಮಾನಕ್ಕೆ ತಕ್ಕಂತೆ ವಿಭಿನ್ನ ಮಾದರಿಯ ಕಥೆ, ಸಂಗೀತ, ಸಂಭಾಷಣೆ ಹೀಗೆ ಮುಂತಾದ ಕಾರಣಗಳಿಂದ ಜನಸಾಮಾನ್ಯರನ್ನು ಮಿತಿಮೀರಿ ಅತಿವೇಗವಾಗಿ ಆಕರ್ಷಿಸುತ್ತದೆ. ಮತ್ತು ಕಡಿಮೆ ಸಮಯದಲ್ಲಿ

ನೋಡಬಹುದಾದ ಮತ್ತು ಯಾವಾಗ ಬೇಕಾದರೂ ನೋಡಬಹುದಾದ ಸರಳ ಮಾಧ್ಯಮವಾಗಿದೆ. ಇತ್ತೀಚಿಗಂತು ಪ್ರತಿಯೊಂದು ಮನೆಯಲ್ಲಿ ಟಿ.ವಿ. ಲ್ಯಾಪ್‌ಟಾಪ್, ಮೊಬೈಲ್‌ಗಳು ಆಗಿದ್ದರಿಂದ ಮನೆಯಲ್ಲಿ ಕುಳಿತು ಸಿನಿಮಾ, ಧಾರವಾಹಿಗಳನ್ನು ನೋಡಬಹುದು. ಹಾಗಾಗಿ ಬಯಲಾಟದ ಪ್ರಮುಖ ಕಾರಣಗಳಾಗಿ ನಿಲ್ಲುತ್ತವೆ.

**ಪ್ರಸಾರ ಮಾಧ್ಯಮಗಳ ನಿರ್ಲಕ್ಷ್ಯ**

ಆಧುನಿಕ ಪ್ರಸಾರ ಮಾಧ್ಯಮಳಾದ ದೂರದರ್ಶನ, ಟಿ.ವಿ. ಚಾನಲ್‌ಗಳು ಹಾಗೂ ಪತ್ರಿಕೆಗಳು ರಾಜಕೀಯ, ಸಾಮಾಜಿಕ, ಸಿನಿಮಾ ಹಾಗೂ ಪ್ರಸ್ತುತ ಘಟನೆಗಳು ಸೇರಿದಂತೆ ಹಲವಾರು ವಿಷಯಗಳನ್ನು ಪ್ರೋತ್ಸಾಹಿಸುತ್ತ ರಂಗಭೂಮಿಯ ಕಲೆಗಳನ್ನು ನಿರ್ಲಕ್ಷ್ಯ ಮಾಡುತ್ತಿದ್ದಾವೆ. ಹಾಗಾಗಿ ರಂಗಕಲೆಯ ಪ್ರಾಮುಖ್ಯತೆ ಹಳ್ಳಿಯ ಜನಸಾಮಾನ್ಯರಿಗೆ ಮತ್ತು ಈ ಆಧುನಿಕ ಜಗತ್ತಿಗೆ ಸರಿಯಾಗಿ ತಲುಪುತ್ತಿಲ್ಲ ಈ ನಿಟ್ಟಿನಲ್ಲಿ ಬಯಲಾಟ ರಂಗಭೂಮಿ ಮಹತ್ವ ಕಡಿಮೆಯಾಗಲು ಪ್ರಸಾರ ಮಾಧ್ಯಮಗಳು ಒಂದು ರೀತಿಯಿಂದ ಕಾರಣವಾಗುತ್ತವೆ.

## ಸರ್ಕಾರಿ ಮತ್ತು ಅಕಡೆಮಿಗಳ ನಿಲಕ್ಷ್ಯ

ಬಯಲಾಟ ರಂಗಕಲೆಯು ಕಡಿಮೆಗೊಳ್ಳಲು ಅಥವಾ ಅಳಿಯುತ್ತಿರಲೂ ಸರ್ಕಾರ ಮತ್ತು ಅಕಡೆಮಿಗಳು ಸಹ ಪ್ರಮುಖ ಕಾರಣಗಳಾಗುತ್ತವೆ. ರಾಯಚೂರು ಜಿಲ್ಲೆಯಾದ್ಯಂತ ಸಾವಿರಾರು ಕಲಾವಿದರು , ನಿರ್ದೇಶಕರು ಸಿಗುತ್ತಾರೆ. ಆದರೆ ಅವರಿಗೆ ಯಾವ ಸರ್ಕಾರವಾಗಲಿ, ಸಂಘಸಂಸ್ಥೆಗಳಾಗಲಿ, ಅಕಾಡೆಮಿಗಳಾಗಲಿ ಅವರನ್ನು ಗುರುತಿಸಿ ಪ್ರೋತ್ಸಾಹಿಸುವುದಾಗಲಿ, ಧನಸಹಾಯ ಮಾಡುವುದಾಗಲಿ ಪ್ರಶಸ್ತಿಗಳನ್ನು ಕೊಡುವುದಾಗಲಿ ಈ ಕಾರ್ಯದಲ್ಲಿ ಸರ್ಕಾರದ ಬೇಜವಾಬ್ದಾರಿತನ ಪ್ರಮುಖ ಕಾರಣವಾಗಿದೆ. ಈ ನಿಟ್ಟಿನಲ್ಲಿ ಸರ್ಕರ ಹಾಗೂ ಅಕಾಡೆಮಿಗಳು ಕೆಲಸ ಮಾಡುತ್ತಿವೆಯಾದರೂ ಸರಿಯಾದ ಫಲಾನುಭವಿಗೆ ಅವಕಾಶಗಳು, ಪ್ರೋತ್ಸಾಹಗಳು ಸಿಗುತ್ತಿಲ್ಲ ಎಂಬುದು ರಂಗಕರ್ಮಿಗಳ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಜಾಗೃತವಹಿಸಿ ಬಯಲಾಟ ರಂಗಭೂಮಿ ಹಾಗೂ ಅಲ್ಲಿನ ಕಲಾವಿದರನ್ನು ಬೆಳೆಸುವುದರ ಮೂಲಕ ಬಯಲಾಟ ರಂಗಭೂಮಿಯನ್ನು ಉಳಿಸಿಕೊಳ್ಳಲು ಶ್ರಮಿಸಬೇಕಿದೆ, ಹೀಗೆ ಒಂದಲ್ಲಾ ಒಂದು ರೀತಿಯಿಂದ ಬಯಲಾಟಸ ರಂಗಭೂಮಿ ಕ್ಷೀಣಿಸುತ್ತದೆ. ಮುಂದೊಂದು ದಿನ ಸಂಪೂರ್ಣವಾಗಿ ನಾಶವಾಗುವುದರಲ್ಲಿ ಸಂದೇಹವಿಲ್ಲ.

ಸವಾಲುಗಳು

ನಮ್ಮ ಸಂಸ್ಕೃತಿಯ ಪ್ರತೀಕ ಮಾನವೀಯ ಮೌಲ್ಯಗಳ ರಾಶಿಯಾದ ಬಯಲಾಟದ ರಂಗಭೂಮಿ ಇಂದಿಗೂ ಮತ್ತು ಮುಂದಿನ ತಲೆಮಾರಿಗೆ ಉಳಿದುಕೊಳ್ಳಲು ಹಲವಾರು ಸವಾಲುಗಳು ನಮ್ಮೆದುರಿಗಿವೆ. ಅವುಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

1) ಉತ್ತರ ಕರ್ನಾಟಕದ ಸಾಹಿತಿಗಳು, ಉದ್ಯಮಿಗಳು , ಹಿರಿಯ ರಂಗಭೂಮಿಯನ್ನು , ರಾಜಕರಣಿಗಳು ಈ ಭಾಗದ ರಂಗಭೂಮಿಯನ್ನು ಪ್ರೋತ್ಸಾಹಿಸುವುದರ ಮೂಲಕ ಈ ಭಾಗದ ಜನತೆಯಲ್ಲಿ ಪ್ರಜ್ಞೆ ಮೂಡಿಸಬೇಕು.

2)ಸರ್ಕಾರ ಮತ್ತು ಅಕಡೆಮಿಗಳು ಬಯಲಾಟದ ಕಲಾವಿದರನ್ನು ಗುರುತಿಸಿ ನಿಜವಾದ ಫಲಾನುಭವಿಗಳಿಗೆ ತನು–ಮನ–ಧನ ಸಹಾಯ ಮತ್ತು ಪ್ರಶಸ್ತಿಭವಿಗಳಿಗೆ ಕೊಡಬೇಕು.

3)ಯಕ್ಷಗಾನಕ್ಕೆ ಸಿಕ್ಕ ಪ್ರಾಶಸ್ತ್ಯ ಬಯಲಾಟಕ್ಕೂ ಸಿಗಬೇಕು.

4) ಪ್ರಸಾರ ಮಾಧ್ಯಮಗಳ ಗಮನ ಬಯಲಾಟದ ರಂಗಭೂಮಿಯತ್ತ ಹರಿಯಬೇಕು.

5) ಸಾಮಾಜಿಕ ನಾಟಕಗಳ ವಸ್ತು ಮತ್ತು ಸನನಿವೇಶಗಳತ್ತ ಗಮನ ಹರಿಸಿ ಅಶ್ಲೀಲತೆಯನ್ನು ಕಡಿಮೆಗೊಳಿಸಿ ಅಂತಹ ಪ್ರಯೋಗಗಳಿಗೆ ಕಡಿವಾಣ ಹಾಕಬೇಕು. ಈ ನಿಟ್ಟಿನಲ್ಲಿ ಸರ್ಕಾರ ಜಾಗೃತಗೊಳ್ಳಬೇಕು.

6)ಬಯಲಾಟದ ಕುರಿತು ವಿದ್ವಾಂಸರಿಂದ ಹಳ್ಳಿಗಳಲ್ಲಿ ಉಪನ್ಯಾಸ ಮಾಡಿಸಬೇಕು ಈ ನಿಟ್ಟಿನಲ್ಲಿ ಅಕಡೆಮಿಗಳು ಕಾರ್ಯನಿರ್ವಹಿಸಬೇಕು.

7)ಜನಸಾಮಾನ್ಯರಲ್ಲಿನ ಸೀಮಿತ ಮನೋಭವನೆಯನ್ನು ಹೋಗಲಾಡಿಸಬೇಕು.

8)ಹಿರಿಯ ರಂಗಕರ್ಮಿಗಳು, ನಿರ್ದೇಶಕರು ಈ ಕಲೆಯ ಬಗ್ಗೆ ಇನ್ನಷ್ಟು ಕಾಳಜಿವಹಿಸಬೇಕು.

9) ಹಳ್ಳಿಗಳಲ್ಲಿ ಜನಸಾಮಾನ್ಯರಿಗೆ ರಾಜಕೀಯ ಬೇರೆ ಸಂಸ್ಕೃತಿ ಬೇರೆ ಎಂಬ ಸಾಮಾನ್ಯ ತಿಳುವಳಿಕೆ ಮಾಡಬೇಕು.

10)ವಿದ್ಯಾವಂತರು , ಪಂಡಿತರು , ವಿದ್ವಾಂಸರು ಈ ಕಲೆಯ ಕಡೆ ವಾಲಬೇಕು (ಕಲೆಯಲ್ಲಿ ಭಾಗವಹಿಸಬೇಕು)

11) ಪತ್ರಿಕೆಗಳು ಬಯಲಾಟದ ರಂಭೂಮಿ ಮೌಲ್ಯವನ್ನು ಪಸರಿಸಬೇಕು.

12)ಪ್ರತಿಭಾವಂತ ಕಲಾವಿದರನ್ನು ಅಕಾಡೆಮಿಗಳು ಗುರುತಿಸಬೇಕು.(ಈ ನಿಟ್ಟಿನಲ್ಲಿ ಕಾರ್ಯಗಳು ನಡೆದಿದ್ದರು ನಿಜವಾದ ಫಲಾನುಭವಿಗಳಿಗೆ ಸೌಲಭ್ಯಗಳು ದೊರಕುತ್ತಿಲ್ಲ.)

13)ಹಿರಿಯ ಕಲಾವಿಧರಿಗೆ ,ನಿರ್ದೇಶಕರಿಗೆ ಸರ್ಕಾರ, ಮಾಸಿಕ ವೇತನ ಕೊಡುವ ವ್ಯವಸ್ಥೆ ಮಾಡಬೇಕು.

14)ಶಿವರಾಮ ಕಾರಂತರಂತಹ ಕಲಾಭಿಮಾನಿಗಳು ಈ ಭಾಗದಲ್ಲಿ ಹೊರಹೊಮ್ಮಬೇಕು.

15) ಬಯಲಾಟದ ಅಕಾಡೆಮಿ ಪ್ರತ್ಯೇಕಗೊಳ್ಳಬೇಕು.

16)ಅಕಾಡೆಮಿಗಳ ವಿಸ್ತರಣೆ ತಾಲ್ಲೂಕ ಮಟ್ಟದವರಿಗೆ ಹಾಗಬೇಕು.

17)ಕಂಪನಿ ನಾಟಕಗಳು ಪುನಃ ಬಯಲಾಟ ರಂಗಭೂಮಿಯ ಕಡೆಗೆ ಮರಳಬೇಕು.

18)ಆದಷ್ಟು ಮಟ್ಟಿಗೆ ಬಯಲಾಟದ ರಂಗಭೂಮಿ ಆಧುನಿಕತೆಗೆ ಹೊಂದಿಕೊಳ್ಳಬೇಕು.

ಹೀಗೆ ಒಟ್ಟಾರೆಎಯಾಗಿ ಜನಪ್ ರಂಗಭೂಮಿಯ ಕಲೆಯನ್ನು ಉಳಿಸಿ ಬೆಳೆಸಿಕೊಳ್ಳಲು ಈ ಮುಂದಿನ ಸವಾಲುಗಳನ್ನು ಸ್ವೀಕರಿಸಿ ಸಂಸ್ಕೃತಿಯ ಪರಂಪರೆಯಾದ ಬಯಲಾಟವನ್ನು ಉಳಿಸಿಕೊಳ್ಳುವುದರ ಮೂಲಕ ನಮ್ಮ ಪೂರ್ವಜರ ಮೌಲ್ಯಯುತ ಕೊಡುಗೆಯನ್ನು ಕಾಪಾಡಿಕೊಳ್ಳುವ ಅಗತ್ಯತೆ ಪ್ರಸ್ತುತ ಜಗತ್ತಿಗೆ ಇದೆ. ಈ ನಿಟ್ಟಿನಲ್ಲಿ ಕನ್ನಡಿಗರ ಪ್ರಯತ್ನವೂ ಕೂಡ ಅಗತ್ಯವಾಗಿದೆ. ಹಾಗಿದ್ದಾಗ ಮಾತ್ರ ನಮ್ಮ ಮುಂದಿನ ತಲೆಮಾರಿನ ಈ ಕಲೆ ತಲುಪುವುದರಲ್ಲಿ ಅನುಮಾನವಿಲ್ಲ.

ಪರಾಮರ್ಶನ ಗ್ರಂಥಗಳು

1. ದೊಡ್ಡಾಟ ಒಂದು ಪರಿಕಲ್ಪನೆ–ಡಾ ಶ್ರೀಶೈಲ ಹುದ್ದಾರ

2.ಬಳ್ಳಾರಿಯ ಜಿಲ್ಲೆಯ ಬಯಲಾಟಗಳು –ಡಾ. ಕೆ.ಆರ್ ದುರ್ಗಾದಾಸ

3. ಬಯಲಾಟದ ಹಸ್ತಪ್ರತಿಗಳ ಅಂತರ್ ಶೋಧ–ಎಆ ಬಿ.ಎಮ್. ಗುರುನಾಥ್

4 . ಉತ್ತರಕರ್ನಾಟಕ ಬಯಲಾಟಗಳು –ಬಸವರಾಜ ಮಲಶೇಟ್ಟಿ